ದಿನಾಂಕಃ 10-01-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- 1 ಮತ್ತು 3 ನೇ ಪ್ರತಿವಾದಿಯರ ಪರ ಶ್ರೀ ಎನ ಎಂ ಪಿ ವಕೀಲರಿಂದ

1 ಮತ್ತು 3 ನೇ ಪ್ರತಿವಾದಿಯರ ಪರ ವಕೀಲರು ಪಾಟಿ ಸವಾಲು ಏನೂ ಇರುವುದಿಲ್ಲ ಎಂದು ಹೇಳಿರುತ್ತಾರೆ.

ಪಾಟಿ ಸವಾಲುಃ- 2, 4, 6 ಮತ್ತು 7 ನೇ ಪ್ರತಿವಾದಿಯರ ಪರ ಶ್ರೀ ಎನ ಎನ ಪಿ ವಕೀಲರಿಂದ

ನಾನು 9 ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು, ಬರೆಯಲು ಬರುತ್ತದೆ. ವಾದ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೆನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಬರೆಯಲು ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೆನೆ. ವಾದ ಪತ್ರ ತಯಾರಿಸಿದ ನಂತರ ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಅಜ್ಜನ ಹೆಸರು ಈರನಗೌಡ. ಈರನಗೌಡರಿಗೆ ಎಷ್ಟು ಜನ ಸಹೋದರರು ಎಂದು ನನಗೆ ಗೊತ್ತಿಲ್ಲ. ಈರನಗೌಡರಿಗೆ ಮೂರು ಜನ ಮಕ್ಕಳು. ಅವರ ಹೆಸರುಗಳು ಪುಟ್ಟನಗೌಡ, ಸಂಗಮ್ಮ ಹಾಗೂ ರುದ್ರಗೌಡ. ನನ್ನ ವಾದ ಪತ್ರದಲ್ಲಿ ಪುಟ್ಟನಗೌಡ, ಸಂಗಮ್ಮ ಹಾಗೂ ರುದ್ರಗೌಡರ ಹೆಸರು ನಮೂದ ಮಾಡಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ಮೂಲ ಪುರುಷ ಈರನಗೌಡ ಎಂದರೆ ಸರಿ. ಈರನಗೌಡರಿಗೆ ಒಬ್ಬ ಸಹೋದರನಿದ್ದು ಆತನ ಹೆಸರು ಪರ್ವತಗೌಡ ಎಂದರೆ ನನಗೆ ಮಾಹಿತಿ ಇಲ್ಲ. ಪರ್ವತಗೌಡರಿಗೆ ಸಿದ್ದನಗೌಡ ಹಾಗೂ ಚನ್ನಬಸನಗೌಡ ಎಂಬ ಗಂಡು ಮಕ್ಕಳು ಇದ್ದಾರೆ ಎಂದರೆ ಸರಿ.

ದಿಃ 14.04.1962 ರಂದು ಈರನಗೌಡ ಹಾಗೂ ಪರ್ವತಗೌಡನ ಮಕ್ಕಳ ನಡುವೆ ವಿಭಾಗವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಜನ್ಮ ದಿನಾಂಕ 15.08.1968. ಸರ್ವೇ ನಂ. 134/1+2 ಎ ಕ್ಷೇತ್ರ 4 ಎಕರೆ 36 ಗುಂಟೆ ಜಮೀನು ನಮ್ಮ ಕುಟುಂಬಕ್ಕೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ. 134/1+2 ಬಿ ಕ್ಷೇತ್ರ 4 ಎಕರೆ 37 ಗುಂಟೆ, ಪೋಟ ಕರಾಬ 7 ಗುಂಟೆ ಜಮೀನು ನಮ್ಮ ಕುಟುಂಬಕ್ಕೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೇ ನಂ. 135/1 ಕ್ಷೇತ್ರ 4 ಎಕರೆ 37 ಗುಂಟೆ, ಪೋಟ ಕರಾಬ 4 ಗುಂಟೆ ಜಮೀನು ನಮ್ಮ ಕುಟುಂಬಕ್ಕೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನುಗಳು ನಮ್ಮ ಕುಟುಂಬಕ್ಕೆ ಯಾವ ರೀತಿ ಬಂದಿವೆ ಎಂದು ನನಗೆ ಗೊತ್ತಿಲ್ಲ ಆದರೆ ಆ ಎಲ್ಲಾ ಜಮೀನುಗಳು ನನ್ನ ತಂದೆಯ ಹೆಸರಿನಲ್ಲಿ ಇದ್ದವು. ದಿಃ 14.04.1962 ರಂದು ಆದಂತಹ ವಿಭಾಗದಲ್ಲಿ ದಾವಾ ಜಮೀನುಗಳು ಪುಟ್ಟನಗೌಡ ಹಾಗೂ ರುದ್ರಗೌಡರ ಹಿಸ್ಸೆಗೆ ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ.

ಸರ್ವೇ ನಂ. 135/2 ರ ಕ್ಷೇತ್ರ 30 ಗುಂಟೆ ಇದೆ. ಸದರಿ ಜಮೀನು ನನ್ನ ತಂದೆಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಈ ಜಮೀನು ಹೇಗೆ ಬಂದಿತ್ತು ಎಂಬ ಮಾಹಿತಿಯನ್ನು ನಾನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಡ ಪ್ರಕಾರ ಆ ಜಮೀನು ನನ್ನ ತಂದೆಗೆ ಬಂದಿತ್ತು ಎಂಬ ಮಾಹಿತಿ ನಾನು ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ಡ ಸಂಖ್ಯೆ 2793 ಆಗಿದೆ. ಸಾಕ್ಷಿಗೆ ಒಂದು ದಾಖಲೆ

ತೋರಿಸಲಾಗಿ ಸಾಕ್ಷಿಯು ಅದು ಡ ಸಂಖ್ಯೆ 1457 ಎಂದು ಹೇಳಿರುತ್ತಾರೆ. ಸದರಿ ದಾಖಲೆಯ ಅಕ್ಷರಗಳು ತುಂಬಾ ಚಿಕ್ಕವು ಇರುವುದರಿಂದ ನನಗೆ ಓದಲು ಆಗುತ್ತಿಲ್ಲ. ದಿಃ 08.07.1956 ರಂದು ಆ ಜಮೀನನ್ನು ನನ್ನ ತಂದೆ ಶ್ರೀನಿವಾಸ ಗೋಪಾಲರಾವ್ ದೇಸಾಯಿ ಹಾಗೂ ಇತರರಿಂದ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ದಿಃ 16.06.2017 ರಂದು ಮೃತಪಟ್ಟಿದ್ದಾರೆ. ನನ್ನ ತಂದೆ ತನ್ನ ಮರಣದವರೆಗೆ ಸ್ವತಂತ್ರವಾಗಿ ಓಡಾಡಿಕೊಂಡಿದ್ದರು ಎಂದರೆ ಸರಿ. ಅವರ ಚಿತ್ತ ಸುರಕ್ಷಿತವಾಗಿತ್ತು ಎಂದರೆ ಸರಿ. ನನ್ನ ತಂದೆ ಸಮಾಜದಲ್ಲಿ ಒಳ್ಳೆಯ ಹೆಸರು ಗಳಿಸಿದ್ದರು ಎಂದರೆ ಸರಿ. ತಡಸ ಗ್ರಾಮದ ಗ್ರಾಮಸ್ಥರು ವಿಭಾಗದ ಹಾಗೂ ಇತರೇ ವ್ಯಾಜ್ಯಗಳ ಪಂಚಾಯತಿಗೆ ನನ್ನ ತಂದೆಯನ್ನು ಕರೆಯುತ್ತಿದ್ದರು ಎಂದರೆ ಸರಿ. ಅವರು ಹೇಳಿದ ಮಾತನ್ನು ಯಾರೂ ತೆಗೆದು ಹಾಕುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆಯ ಜೀವಿತ ಅವಧಿಯಲ್ಲಿ ನಮ್ಮ ಕುಟುಂಬದ ಹಿರಿತನವನ್ನು ನನ್ನ ಅಣ್ಣನಾದ 2 ನೇ ಪ್ರತಿವಾದಿ ಮಾಡುತ್ತಿದ್ದರು. ನಮ್ಮ ಕುಟುಂಬದ ಹಿರಿತನ ನನ್ನ ತಂದೆ ಮಾಡುತ್ತಿದ್ದರೂ ಸಹ 2 ನೇ ಪ್ರತಿವಾದಿ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ 2000 ಇಸ್ವಿವರೆಗೂ ನನ್ನ ತಂದೆ ಹಿರಿತನ ಮಾಡುತ್ತಿದ್ದರು ಆನಂತರ ನನ್ನ ತಂದೆಯ ಕಣ್ಣು ಸರಿಯಾಗಿ ಕಾಣಿಸದಿರುವ ಕಾರಣ ನನ್ನ ಅಣ್ಣ 2 ನೇ ಪ್ರತಿವಾದಿ ಹಿರಿತನ ಮಾಡುತ್ತಿದ್ದರು ಎಂದು ನುಡಿದಿದ್ದಾರೆ.

ತಡಸ ಗ್ರಾಮದ ಸರ್ವೇ ನಂ. 256 ಕ್ಷೇತ್ರ 2 ಎಕರೆ 23 ಗುಂಟೆ ಜಮೀನಿನ ಚಕ್ಕಬಂದಿ ನನಗೆ ಗೊತ್ತು. ಆ ಜಮೀನಿನ ಪಶ್ಚಿಮಕ್ಕೆ ಸರಕಾರಿ ರಸ್ತೆ, ಪೂರ್ವಕ್ಕೆ ವಿರುಪನಗೌಡ ಸಿದ್ದನಗೌಡರವರ ಜಮೀನು, ದಕ್ಷಿಣಕ್ಕೆ ಸರಕಾರಿ ರಸ್ತೆ ಹಾಗೂ ಉತ್ತರಕ್ಕೆ ಗಂಗಮ್ಮ ಪಾಟೀಲರವರ ಜಮೀನು ಇದೆ. ತಡಸ ಗ್ರಾಮದ ಸರ್ವೇ ನಂ. 204/1 ಕ್ಷೇತ್ರ 2 ಎಕರೆ 3 ಗುಂಟೆಯ ಚಕ್ಕಬಂದಿ ಪೂರ್ವಕ್ಕೆ ಸಿದ್ದನಗೌಡ ಪರ್ವತಗೌಡ ಪಾಟೀಲರವರ ಜಮೀನು, ಉತ್ತರಕ್ಕೆ ಶಂಕ್ರಮ್ಮ ಬಳಗಲಿರವರ ಜಮೀನು, ಪಶ್ಚಿಮಕ್ಕೆ ಸಿದ್ದಯ್ಯ ಕಿರಗಿಮಠರವರ ಜಮೀನು ಹಾಗೂ ದಕ್ಷಿಣಕ್ಕೆ ಶೇಖನಗೌಡ ಚೋಳನಗೌಡ ಪಾಟೀಲರವರ ಜಮೀನು ಇದೆ. ತಡಸ ಗ್ರಾಮದ ಸರ್ವೇ ನಂ. 134/3 ಕ್ಷೇತ್ರ 6 ಗುಂಟೆಯ ಚಕ್ಕಬಂದಿ ಪೂರ್ವಕ್ಕೆ ಗಂಗಮ್ಮ ಪಾಟೀಲರವರ ಜಮೀನು, ದಕ್ಷಿಣಕ್ಕೆ ಹನೀಪಸಾಬ ಕಲಘಟಗಿರವರ ಜಮೀನು, ಪಶ್ಚಿಮಕ್ಕೆ ಆನಂದಗೌಡ ಬಿನ್ ಪುಟ್ಟನಗೌಡ ಹಾಗೂ ಚಿದಾನಂದಗೌಡ ಬಿನ್ ಪುಟ್ಟನಗೌಡರವರ ಜಮೀನು ಹಾಗೂ ಉತ್ತರಕ್ಕೆ ಗಂಗಮ್ಮ ಪಾಟೀಲರವರ ಜಮೀನು ಇದೆ.

ತಡಸ ಗ್ರಾಮದ ಸರ್ವೇ ನಂ. 134/1 ರ ಕ್ಷೇತ್ರ 4 ಎಕರೆ 27 ಗುಂಟೆ ಇದೆ. ಅದರ ಚಕ್ಕಬಂದಿ ಪೂರ್ವಕ್ಕೆ ಹಾಗೂ ಪಶ್ಚಿಮಕ್ಕೆ ಗಂಗಮ್ಮ ಪಾಟೀಲರವರ ಜಮೀನು, ದಕ್ಷಿಣಕ್ಕೆ ಹನೀಪಸಾಬ ಕಲಘಟಗಿರವರ ಜಮೀನು ಹಾಗೂ ಉತ್ತರಕ್ಕೆ ಸರಕಾರಿ ಕಾಲುವೆ ಇದೆ. ತಡಸ ಗ್ರಾಮದ ಸರ್ವೇ ನಂ. 165/6 ಬ ಕ್ಷೇತ್ರ 5 ಎಕರೆ 36 ಗುಂಟೆ ಜಮೀನಿನ ಚಕ್ಕಬಂದಿ ಪೂರ್ವಕ್ಕೆ ಸರಕಾರಿ ಕಾಲುವೆ, ಪಶ್ಚಿಮಕ್ಕೆ ಹುಬ್ಬಳ್ಳಿ

ದುಂಡಸಿ ರಸ್ತೆ, ದಕ್ಷಿಣಕ್ಕೆ ಯಲ್ಲಪ್ಪ ಗುರುಪ್ಪನವರರವರ ಜಮೀನು ಹಾಗೂ ಉತ್ತರಕ್ಕೆ ಡಾಃ ಹೊಸಂಗಡಿರವರ ಜಮೀನು ಇದೆ. ಈಗ ಈ ಆಸ್ತಿಯ ಖಾತೆ ನನ್ನ ಅಣ್ಣನ ಮಕ್ಕಳಾದ 5 ರಿಂದ 7 ನೇ ಪ್ರತಿವಾದಿಯರ ಹೆಸರಿನಲ್ಲಿ ಇದೆ. 2 ನೇ ಪ್ರತಿವಾದಿ ಮಾಡಿಕೊಟ್ಟಂತಹ ನೊಂದಾಯಿತ ವಾಟ್ನಿ ಪತ್ರದ ಪ್ರಕಾರ ಆ ಆಸ್ತಿಯ ಖಾತೆ 5 ರಿಂದ 7 ನೇ ಪ್ರತಿವಾದಿಯರ ಹೆಸರಿನಲ್ಲಿ ದಾಖಲಾಗಿದೆ. ಈ ಆಸ್ತಿಯಲ್ಲಿ ಮೊದಲು ಮಾವಿನ ಮರಗಳು ಇದ್ದವು ಹಾಗೂ ಅವುಗಳನ್ನು ಕಡಿದು ಈಗ ಕಬ್ಬು ಬೆಳೆಯಲಾಗಿದೆ. ಆ ಜಮೀನಿನಲ್ಲಿ ನೀರಾವರಿ ಕಬ್ಬು ಬೆಳೆಯುತ್ತಾರೆ. ಆ ಜಮೀನಿನಲ್ಲಿ ಬೋರು ಇದೆ. ಈ ಜಮೀನಿನಲ್ಲಿ ನಾವು ಸಾಮೂಹಿಕವಾಗಿ ಕಬ್ಬು ಬೆಳೆಯುತ್ತೇವೆ. ಯಾವ ತಿಂಗಳು ಹಾಗೂ ವರುಷದಲ್ಲಿ ಕಬ್ಬು ಹಾಕಿದ್ದೇವೆ ಎಂದು ಹೇಳಲು ಆಗುವುದಿಲ್ಲ. ಯಾವ ಯಾವ ವರುಷದಲ್ಲಿ ಎಷ್ಟು ಟನ್ ಕಬ್ಬು ಬೆಳೆದು ಯಾವ ಪ್ಯಾಕ್ಟರಿಗೆ ಹಾಕಿದ್ದೇವೆ ಎಂದು ನನಗೆ ಗೊತ್ತಿಲ್ಲ ಆದರೆ ನನ್ನ ಅಣ್ಣನಾದ 2 ನೇ ಪ್ರತಿವಾದಿಗೆ ಗೊತ್ತು. 5 ರಿಂದ 7 ನೇ ಪ್ರತಿವಾದಿಯೇ ಆ ಜಮೀನಿನಲ್ಲಿ ಬೋರು ಹಾಕಿಸಿ ಕಬ್ಬು ಬೆಳೆದು ಫಸಲು ತೆಗೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಆ ಜಮೀನಿಂದ ಬಂದ ಆದಾಯದಲ್ಲಿ 2 ನೇ ಪ್ರತಿವಾದಿ ನನಗೆ ಸಂತೆ ಮಾಡಲು ಹಣ ಕೊಡುತ್ತಾರೆ.

ಸರ್ವೇ ನಂ. 134/1+2 ಎ ಕ್ಷೇತ್ರ 5 ಎಕರೆ 3 ಗುಂಟೆ ಜಮೀನು ನನ್ನ ಮತ್ತು 4 ನೇ ಪ್ರತಿವಾದಿಯ ಜಂಟಿ ಹೆಸರಿನಲ್ಲಿ ಇದೆ. ಆ ಜಮೀನಿಂದ ಬಂದ ಆದಾಯವನ್ನು ಸಾಮೂಹಿಕವಾಗಿ ನಾವೆಲ್ಲರೂ ಪಡೆಯುತ್ತೇವೆ. ನನ್ನ ಹೆಸರಿನಲ್ಲಿ ಇರುವ ಜಮೀನಿನ ಆದಾಯ ನಾನು ಪಡೆಯುತ್ತಿದ್ದೆನೆ, 4 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ

ಜಮೀನಿನ ಆದಾಯ ಅವರು ಪಡೆಯುತ್ತಾರೆ ಹಾಗೂ 2 ನೇ ಪ್ರತಿವಾದಿಯ ಹೆಸರಿನಲ್ಲಿರುವ ಜಮೀನಿನ ಆದಾಯ ಅವರು ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಒಟ್ಟು 21 ಎಕರೆ ಜಮೀನು ಇದೆ. ನಮ್ಮ ತಂದೆ ಒಂದು ಮನೆ ಕಟ್ಟಿಸಿದ್ದರು ಈಗ ನಾನು ಒಂದು ಮನೆ ಕಟ್ಟಿದ್ದೆನೆ ಹಾಗೂ 2 ನೇ ಪ್ರತಿವಾದಿಯ ಮಕ್ಕಳು ಒಂದು ಮನೆ ಕಟ್ಟಿದ್ದಾರೆ. ನಮ್ಮ ಮನೆತನಕ್ಕೆ ಕುಟುಂಬ ಪಡಿತರ ಚೀಟಿ ಇದೆ. ನನ್ನ ಕುಟುಂಬ ಪಡಿತರ ಚೀಟಿಯಲ್ಲಿ ನನ್ನ, ನನ್ನ ಹೆಂಡತಿ ಹಾಗೂ ನನ್ನ ಇಬ್ಬರು ಮಕ್ಕಳ ಹೆಸರು ಇವೆ. ಆ ಪಡಿತರ ಚೀಟಿಗೆ ಬರುವ ಪಡಿತರ ನಾನೇ ಪಡೆಯುತ್ತೇನೆ. 4 ನೇ ಪ್ರತಿವಾದಿಯ ಕುಟುಂಬ ಪಡಿತರ ಚೀಟಿಯ ಬಗ್ಗೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ಕುಟುಂಬದಲ್ಲಿ ನಾಲ್ಕು ಜನ ಇದ್ದಾರೆ. 2 ನೇ ಪ್ರತಿವಾದಿಯ ಕುಟುಂಬದಲ್ಲಿ ಒಟ್ಟು ಆರು ಜನ ಇದ್ದಾರೆ. ನನಗೆ ಮತ್ತು ನನ್ನ ಸಹೋದರರಿಗೆ ಪ್ರತ್ಯೇಕ ಕುಟುಂಬ ಪಡಿತರ ಚೀಟಿಗಳು ಹಾಗೂ ಪ್ರತ್ಯೇಕ ಮನೆಗಳು ಇವೆ ಎಂದರೆ ಸರಿ. ನಾನು ಮತ್ತು ನನ್ನ ಸಹೋದರರು ಪ್ರತ್ಯೇಕ ವಾಸವಾಗಿದ್ದೇವೆ ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ನಾನು ಮತ್ತು ನನ್ನ ಸಹೋದರರು ಪ್ರತ್ಯೇಕ ವಾಸವಾಗಿದ್ದೇವೆ.

ನನ್ನ ತಾಯಿ ದಿಃ 30.07.2005 ರಂದು ಮೃತಪಟ್ಟಿದ್ದಾರೆ. 1 ನೇ ಪ್ರತಿವಾದಿಯ ಮದುವೆ ಮಾಡಿ ಗರಗ ಗ್ರಾಮಕ್ಕೆ ಕೊಡಲಾಗಿದೆ. ಮದುವೆ ಆದಾಗಿನಿಂದ 1 ನೇ ಪ್ರತಿವಾದಿ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಆಗಾಗ ತವರು ಮನೆಗೆ ಬಂದು ಹೋಗುತ್ತಾರೆ ಎಂದು ನುಡಿದಿದ್ದಾರೆ.

ಮದುವೆ ಆದಾಗ 1 ನೇ ಪ್ರತಿವಾದಿ ಆರ್ಥಿಕವಾಗಿ ಚೆನ್ನಾಗಿದ್ದರು ಎಂದರೆ ಸರಿ. ಸಾಕ್ಷಿಯು ಸ್ವತಃ ಅವರ ಗಂಡ ತೀರಿಕೊಂಡ ನಂತರ ಅವರಿಗೆ ಸಮಸ್ಯೆ ಆಗಿದೆ ಎಂದು ನುಡಿದಿದ್ದಾರೆ. 1 ನೇ ಪ್ರತಿವಾದಿಯ ಮದುವೆ ನನ್ನ ತಂದೆ ಮಾಡಿರುತ್ತಾರೆ. ಮದುವೆ ಸಮಯದಲ್ಲಿ 1 ನೇ ಪ್ರತಿವಾದಿಗೆ ಸಾಕಷ್ಟು ಬಂಗಾರ, ಬೆಳ್ಳಿ, ಹಣ ವರೋಪಚಾರ ಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ ಏಕೆಂದರೆ ಆಗ ನಾನು ಚಿಕ್ಕವನಿದ್ದೆ.

3 ನೇ ಪ್ರತಿವಾದಿ ಗಂಡನ ಮನೆಯಲ್ಲಿ ಆರ್ಥಿಕವಾಗಿ ಚೆನ್ನಾಗಿದ್ದಾರೆ ಎಂದರೆ ಸಾಧಾರಣವಾಗಿ ಇದ್ದಾರೆ. ಮದುವೆ ಸಮಯದಲ್ಲಿ 3 ನೇ ಪ್ರತಿವಾದಿಗೆ ಸಾಕಷ್ಟು ಬಂಗಾರ, ಬೆಳ್ಳಿ, ಹಣ ವರೋಪಚಾರ ಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ ಏಕೆಂದರೆ ಆಗ ನಾನು ಚಿಕ್ಕವನಿದ್ದೆ. ನನ್ನ ಹೆಂಡತಿಯ ಹೆಸರು ಸರೋಜಾ ಪಾಟೀಲ. ಅವರ ತವರೂರು ನೆಲ್ಕಿಹರವಿ, ತಾಲೂಕು ಕಲಘಟಗಿ. ನನ್ನ ಹೆಂಡತಿ 3 ನೇ ಪ್ರತಿವಾದಿಯ ಮಗಳು ಎಂದರೆ ಸರಿ.

ತಡಸ ಗ್ರಾಮದ ಡ ಸಂಖ್ಯೆ 2793 ದಾಖಲಾದ ವಿಷಯ ನನಗೆ ನನ್ನ ತಂದೆಯ ಮರಣದ ನಂತರ ಗೊತ್ತಾಯಿತು. ಆ ವಿಷಯ ನನಗೆ, ನನ್ನ ಸಹೋದರ, ಸಹೋದರಿಯರಿಗೆ ಮೊದಲೇ ಗೊತ್ತಿದ್ದರೂ ಸಹ ನನ್ನ ತಂದೆಯ ಮರಣದ ನಂತರ ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಜೀವಿತ ಅವಧಿಯಲ್ಲಿಯೇ ದಿಃ 25.07.1984 ರಂದು ನಮ್ಮ ಕುಟುಂಬದಲ್ಲಿ ವಿಭಾಗಿ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಆ ವಾಟ್ನಿ ಪ್ರಕಾರ ತಡಸ ಗ್ರಾಮದ ಸರ್ವೇ ನಂ. 134/1, 134/3 ಒಟ್ಟು ಕ್ಷೇತ್ರ 4 ಎಕರೆ ಹಾಗೂ ಸರ್ವೇ ನಂ. 256 ಕ್ಷೇತ್ರ 2

ಎಕರೆ 22 ಗುಂಟೆ ಜಮೀನು ನನ್ನ ಹಿಸ್ಸೆಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ. 256 ಕ್ಷೇತ್ರ 2 ಎಕರೆ 22 ಗುಂಟೆ ಜಮೀನು ಊರಿನ ಪಕ್ಕದಲ್ಲಿ ಇದೆ ಎಂದರೆ ಸರಿ. ಸದರಿ ಜಮೀನು ಬೆಲೆ ಬಾಳುವ ಆಸ್ತಿ ಎಂದರೆ ಸರಿ. ನಾನು ಚಿಕ್ಕವನು ಎಂದು ಆ ಆಸ್ತಿಯನ್ನು ನನ್ನ ತಂದೆ ನನಗೆ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೇ ನಂ. 135/1 ಕ್ಷೇತ್ರ 4 ಎಕರೆ, ಸರ್ವೇ ನಂ. 165/6 ಬಿ ಕ್ಷೇತ್ರ 2 ಎಕರೆ 36 ಗುಂಟೆ ಜಮೀನು 2 ನೇ ಪ್ರತಿವಾದಿಯ ಹಿಸ್ಸೆಗೆ ಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ. 135/1, 135/2 ಒಟ್ಟು ಕ್ಷೇತ್ರ 1 ಎಕರೆ 27 ಗುಂಟೆ, ಸರ್ವೇ ನಂ. 134/1+2 ಎ ಕ್ಷೇತ್ರ 36 ಗುಂಟೆ, ಸರ್ವೇ ನಂ. 165/6 ಬಿ ಕ್ಷೇತ್ರ 2 ಎಕರೆ 36 ಗುಂಟೆ, ಸರ್ವೇ ನಂ. 204/1 ಕ್ಷೇತ್ರ 2 ಎಕರೆ 3 ಗುಂಟೆ ಒಟ್ಟು 7 ಎಕರೆ 22 ಗುಂಟೆ ಜಮೀನನ್ನು 4 ನೇ ಪ್ರತಿವಾದಿಯ ಹಿಸ್ಸೆಗೆ ಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಮಾಡಿಕೊಟ್ಟಂತಹ ವಾಟ್ನಿ ಪ್ರಕಾರ ನಾವೆಲ್ಲರೂ ಜಮೀನುಗಳ ವಹಿವಾಟಿಯಲ್ಲಿ ಇದ್ದೇವೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯ ಮಗಳು ನನ್ನ ಹೆಂಡತಿಯಾಗಿದ್ದು ಅವರ ಚಿತಾವಣೆ ಮೇರೆಗೆ ನಾನು ನನ್ನ ಸಹೋದರರ ವಿರುದ್ಧ ವಿಭಾಗ ಕೇಳಿ ಈ ಸುಳ್ಳು ದಾವೆ ಹಾಕಿದ್ದೆನೆ ಎಂದರೆ ಸರಿಯಲ್ಲ. ಡ ಸಂಖ್ಯೆ 2793 ಪ್ರಶ್ನಿಸಿ ನಾನು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಅವರು ನನಗೆ ನ್ಯಾಯಾಲಯಕ್ಕೆ ಹೋಗಲು ತಿಳಿಸಿದ್ದರು. ನಾನು ಸಲ್ಲಿಸಿದ ಮೇಲ್ಮನವಿ ಇತ್ಯರ್ಥ್ಯ ಆಗಿರುವುದಿಲ್ಲ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.